ರಾಗಿ (Finger Millet)

ರಾಗಿಯು ಒಂದು ಮುಖ್ಯ ಬೆಳೆಯಾಗಿದ್ದು, ಇದನ್ನು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಬಳ್ಳಾರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಈ ಬೆಳೆಯನ್ನು 6.79 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ಇದರ ಉತ್ಪಾದನೆಯು 12.77 ಲಕ್ಷ ಟನ್‌ಗಳಷ್ಟಿದ್ದು, ಸರಾಸರಿ ಇಳುವರಿಯು ಪ್ರತಿ ಎಕರೆಗೆ 792 ಕಿ.ಗ್ರಾಂಗಳಷ್ಟಿದೆ.

ತಳಿಗಳ ವಿವರ



ಜಿ.ಪಿ.ಯು–28– ಈ ತಳಿಯನ್ನು ಉತ್ತರ ಅರೆಮಲೆನಾಡು ಪ್ರದೇಶಕ್ಕೆ ಶಿಫಾರಸು ಮಾಡಲಾಗಿದ್ದು, ಇದರ ಅವಧಿಯು 115–120 ದಿನಗಳು. ಬಿತ್ತನೆಯನ್ನು ಜೂನ್–ಜುಲೈ ತಿಂಗಳಿನಲ್ಲಿ ಕೈಗೊಳ್ಳಬಹುದು.

ಡಿ.ಹೆಚ್.ಆರ್.ಎಸ್–1– ಈ ತಳಿಯನ್ನು ಉತ್ತರ ಒಣ ಪ್ರದೇಶ ಹಾಗೂ ಉತ್ತರ ಅರೆಮಲೆನಾಡು ಪ್ರದೇಶಕ್ಕೆ ಶಿಫಾರಸು ಮಾಡಲಾಗಿದ್ದು, ಇದರ ಅವಧಿಯು 110–112 ದಿನಗಳು. ಬಿತ್ತನೆಯನ್ನು ಜೂನ್–ಜುಲೈ ತಿಂಗಳಿನಲ್ಲಿ ಕೈಗೊಳ್ಳಬಹುದು.

ಡಿ.ಹೆಚ್.ಎಫ್.ಎಮ್–78–3– ಈ ತಳಿಯನ್ನು ಉತ್ತರ ಒಣ ಪ್ರದೇಶ ಹಾಗೂ ಉತ್ತರ ಅರೆಮಲೆನಾಡು ಪ್ರದೇಶಕ್ಕೆ ಶಿಫಾರಸು ಮಾಡಲಾಗಿದ್ದು, ಇದರ ಅವಧಿಯು 115 ದಿನಗಳು. ಬಿತ್ತನೆಯನ್ನು ಜೂನ್–ಜುಲೈ ತಿಂಗಳಿನಲ್ಲಿ ಕೈಗೊಳ್ಳಬಹುದು.

ಬಿತ್ತನೆಗೆ ಬೇಕಾಗುವ ಬೇಸಾಯ ಸಾಮಗ್ರಿಗಳು (ಪ್ರತಿ ಎಕರೆಗೆ)

ಬಿತ್ತನೆ ಬೀಜ		
ಕೂರಿಗೆ ಬಿತ್ತನೆಗೆ	3–4 ಕಿ. ಗ್ರಾಂ	
ನಾಟಿ ಬೆಳೆಗೆ	2 ಕಿ. ಗ್ರಾಂ	
ಸಾವಯವ ಗೊಬ್ಬರಗಳು		
ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್	3 ಟನ್	
ಅಜೋಸ್ಪಿರಿಲಂ (ಬೀಜೋಪಚಾರಕ್ಕೆ)	200 ಗ್ರಾಂ	
ರಾಸಾಯನಿಕ ಗೊಬ್ಬರಗಳು	**ಖುಷ್ಕಿ**	**ನೀರಾವರಿ**
ಸಾರಜನಕ	20 ಕಿ.ಗ್ರಾಂ	40 ಕಿ.ಗ್ರಾಂ
ರಂಜಕ	16 ಕಿ.ಗ್ರಾಂ	20 ಕಿ.ಗ್ರಾಂ
ಪೊಟ್ಯಷ್	10 ಕಿ.ಗ್ರಾಂ	20 ಕಿ.ಗ್ರಾಂ

ಬೀಜ ಹದಮಾಡುವುದು

ಪ್ರತಿ ಕಿ. ಗ್ರಾಂ. ರಾಗಿ ಬೀಜವನ್ನು 600 ಮಿ.ಲೀ. ನೀರಿನಲ್ಲಿ 15 ಗಂಟೆಗಳ ವರೆಗೆ ನೆನೆಸಿ (ಸಾಯಂಕಾಲದಿಂದ ಮಾರನೆ ದಿನ ಬೆಳಗಿನವರೆಗೆ ನೆನೆಸುವುದರಿಂದ ಮೊದಲ ಮೊಳಕೆ ಲಕ್ಷಣಗಳನ್ನು ಕಾಣಬಹುದು) ನಂತರ ಬೀಜವನ್ನು 24 ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ ಬಿತ್ತನೆ ಕೈಗೊಳ್ಳಬೇಕು.

ಬೀಜೋಪಚಾರ

12.5 ಗ್ರಾಂ. ಸತುವಿನ ಸಲ್ಫೇಟ್‌ನ್ನು 5–6 ಚಮಚ ನೀರಿನಲ್ಲಿ ಬೆರೆಸಿ ತಯಾರಿಸಿದ ದ್ರಾವಣವನ್ನು ಒಂದು ಮಡಿಕೆ ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಿ ಹಾಕಿ, ಇದರಲ್ಲಿ 2.0–2.5 ಕಿ.ಗ್ರಾಂ ಬೀಜವನ್ನು ಮಿಶ್ರಮಾಡಿ ಒಂದು ರಾತ್ರಿ ಇಡಬೇಕು. ನಂತರ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಬೇಕು.

ಸಸಿ ಮಡಿ (ನಾಟಿ ಬೆಳೆಗೆ)

ಸುಮಾರು 150 ಚ.ಮೀ. ಪ್ರದೇಶದಲ್ಲಿ 7.5 ಮೀ. ಉದ್ದ 1.2 ಮೀ. ಅಗಲ ಮತ್ತು 10 ಸೆಂ.ಮೀ. ಎತ್ತರದ ಸಸಿಮಡಿಗಳನ್ನು ಮಾಡಿ, ಒಂದು ಮಡಿಗೆ 3 ಬುಟ್ಟಿ ಕೊಟ್ಟಿಗೆ ಗೊಬ್ಬರ, ಅರ್ಧ ಕಿ.ಗ್ರಾಂ ಅಮೋನಿಯಂ ಸಲ್ಫೇಟ್, 1 ಕಿ.ಗ್ರಾಂ ಸೂಪರ್ ಫಾಸ್ಪೇಟ್, ಅರ್ಧ ಕಿ.ಗ್ರಾಂ ಮ್ಯೂರಿಯೇಟ್ ಆಫ್ ಪೊಟ್ಯಾಷ್ ಹಾಗೂ 750 ಗ್ರಾಂ ಸತುವಿನ ಸಲ್ಫೇಟ್ ಗೊಬ್ಬರಗಳನ್ನು ಮಣ್ಣಿನಲ್ಲಿ ಬೆರೆಸಬೇಕು. 7.5 ಸೆಂ.ಮೀ. ಅಂತರದ ಸಾಲಿನಲ್ಲಿ ಬೀಜವನ್ನು ಬಿತ್ತಿದ ನಂತರ ಹಸನಾದ ಒಣ ಮಣ್ಣು ಅಥವಾ ಕೊಟ್ಟಿಗೆ ಗೊಬ್ಬರದಿಂದ ಬೀಜವನ್ನು ಮುಚ್ಚಬೇಕು. ಪ್ರತಿದಿನ ಸಾಯಂಕಾಲ ಮಡಿಗಳಿಗೆ ನೀರನ್ನು ಒದಗಿಸಿ, ಬಿತ್ತಿದ 12 ದಿನಗಳ ನಂತರ ಪ್ರತಿ ಮಡಿಗೆ 250 ಕಿ.ಗ್ರಾಂ ಅಮೋನಿಯಂ ಸಲ್ಫೇಟ್‌ನ್ನು ಮೇಲು ಗೊಬ್ಬರವಾಗಿ ಕೊಡಬೇಕು. ಬಿತ್ತಿದ 20 ದಿನಗಳ ನಂತರ ಸಸಿಗಳನ್ನು ನಾಟಿಗೆ ಉಪಯೋಗಿಸಬೇಕು.

ಬಿತ್ತನೆ

ಕೂರಿಗೆಯಿಂದ 22.5–30 ಸೆಂ.ಮೀ. ಅಂತರದ ಸಾಲುಗಳಲ್ಲಿ ಬಿತ್ತನೆ ಮಾಡಬೇಕು. ನಾಟಿ ಮಾಡುವುದಾದಲ್ಲಿ 22.5–30 ಸೆಂ.ಮೀ. ಸಾಲುಗಳಲ್ಲಿ 10 ಸೆಂ.ಮೀ. ಅಂತರದಲ್ಲಿ 2–3 ಸಸಿಗಳನ್ನು ನಾಟಿ ಮಾಡಬೇಕು. ಬಿತ್ತನೆ ಅಥವಾ ನಾಟಿ ಮಾಡುವ ಮೊದಲು ಶಿಫಾರಸ್ಸಿನ ಶೇ. 50 ರಷ್ಟು ಸಾರಜನಕ ಮತ್ತು ಪೂರ್ತಿ ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರವನ್ನು ಕೊಡಬೇಕು. ಆರರಿಂದ ಏಳು ವಾರಗಳ ನಂತರ ಉಳಿದ ಶೇ. 50 ರ ಸಾರಜನಕ ಒದಗಿಸುವ ರಸಗೊಬ್ಬರವನ್ನು ಮೇಲುಗೊಬ್ಬರವಾಗಿ ಒದಗಿಸಬೇಕು.

ಅಂತರ ಬೇಸಾಯ ಮತ್ತು ಕಳೆ ನಿಯಂತ್ರಣ

ಬಿತ್ತನೆ ಮಾಡಿದ 3 ವಾರಗಳ ನಂತರ 15 ದಿನಗಳಿಗೊಮ್ಮೆ ಎಡೆಕುಂಟೆ ಹಾಯಿಸುವುದರಿಂದ ಕಳೆಯನ್ನು ನಿಯಂತ್ರಿಸಬಹುದಲ್ಲದೆ, ಬಿದ್ದ ಮಳೆಯ ನೀರು ಮಣ್ಣಿನಲ್ಲಿ ಇಂಗಲು ಸಾಧ್ಯವಾಗುತ್ತದೆ. ಬಿತ್ತಿದ 30 ದಿನಗಳಲ್ಲಿ ಒಂದು ಸಲ ಕಳೆ ತೆಗೆಯಬೇಕು. ನೀರಾವರಿ ಇದ್ದಲ್ಲಿ ಕೆಂಪು ಮಣ್ಣಿನಲ್ಲಿ 8 ದಿನಗಳಿಗೊಮ್ಮೆ, ಕಪ್ಪು ಮಣ್ಣಿನಲ್ಲಿ 15 ದಿನಗಳಿಗೊಮ್ಮೆ ನೀರು ಹಾಯಿಸಬೇಕು.

ಮಿಶ್ರ ಬೆಳೆ

ಈ ಬೆಳೆಯಲ್ಲಿ ತೊಗರಿ, ಎಳ್ಳು ಹಾಗೂ ಸಾಸಿವೆ ಬೆಳೆಗಳನ್ನು 4:2 ಪ್ರಮಾಣದಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುವುದು ಲಾಭದಾಯಕ.

ಸಸ್ಯ ಸಂರಕ್ಷಣಾ ಕ್ರಮಗಳು

ಕೀಟಗಳು

ಕಾಂಡ ಕೊರಕ



ಲಕ್ಷಣಗಳು: ಮರಿ ಹುಳುಗಳು ಕಾಂಡವನ್ನು ಕೊರೆದು ತಿನ್ನುವುದರಿಂದ ಎಲೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳನ್ನು ಕಾಣಬಹುದು. ನಂತರ ಸುಳಿ ಒಣಗಲು ಪ್ರಾರಂಭವಾಗುತ್ತದೆ. ಈ ಕೀಟ ತೆನೆ ಕಟ್ಟುವ ಹಂತದಲ್ಲಿ ಬಂದರೆ ತೆನೆಗಳು ಜೊಳ್ಳಾಗುತ್ತವೆ.

ನಿರ್ವಹಣಾ ಕ್ರಮಗಳು: ಕಾಂಡಕೊರಕ ಹುಳುವಿನ ಬಾಧೆ ಕಡಿಮೆ ಪ್ರಮಾಣದಲ್ಲಿ ಕಂಡುಬರುವದು, ಆದ್ದರಿಂದ ಕೀಟನಾಶಕಗಳ ಬಳಕೆ ಇರುವುದಿಲ್ಲ.

ರಸ ಹೀರುವ ಕೀಟಗಳು



ಲಕ್ಷಣಗಳು: ಇವುಗಳಲ್ಲಿ ಎಲೆಯ ಹೇನು ಬಹು ಮುಖ್ಯವಾದದ್ದು. ಈ ಹೇನು ಗರಿಗಳನ್ನು ಮುತ್ತಿ ರಸ ಹೀರುವುದರಿಂದ ಪೈರಿನ ಬೆಳವಣಿಗೆ ಕುಂಠಿತವಾಗುತ್ತದೆ. ನೂರಾರು ಹೇನುಗಳು ಗಿಡದ ಕಾಂಡ, ಎಲೆ ಮತ್ತು ಹೊರಬರುತ್ತಿರುವ ತೆನೆಯನ್ನು ಮುತ್ತಿಕೊಂಡು ರಸ ಹೀರುವುದನ್ನು ಸಾಮಾನ್ಯವಾಗಿ ನೋಡಬಹುದು.

ನಿರ್ವಹಣಾ ಕ್ರಮಗಳು: 1 ಮಿ.ಲೀ. ಮಿಥೈಲ್ ಪ್ಯಾರಾಥಿಯಾನ್ 50 ಇ.ಸಿ. ಅಥವಾ 1.7 ಮಿ.ಲೀ. ಡೈಮಿಥೋಯೇಟ್ 30 ಇ.ಸಿ. ಕೀಟನಾಶಕವನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ, ಸಿಂಪರಣೆ ಮಾಡಬೇಕು. ಎಕರೆಗೆ ಸುಮಾರು 200 ಲೀ. ಸಿಂಪರಣಾ ದ್ರಾವಣ ಬೇಕಾಗುತ್ತದೆ. ಸಿಂಪರಣೆಗೆ ನೀರಿನ ಅಭಾವ ಇದ್ದಲ್ಲಿ ಕಾರ್ಬಾರಿಲ್ ಅಥವಾ ಫೋಜಲೋನ್ ಶೇ. 4 ಕೀಟನಾಶಕದ ಧೂಳನ್ನು ಎಕರೆಗೆ 8 ಕಿ.ಗ್ರಾಂ. ಪ್ರಮಾಣದಲ್ಲಿ ಧೂಳೀಕರಿಸಬೇಕು.

ತೆನೆ ಕೀಟಗಳು



ಲಕ್ಷಣಗಳು: ರಾಗಿ ತೆನೆಗೆ ಹಲವಾರು ಜಾತಿಯ ಪತಂಗದ ಹುಳುಗಳು ಬಾಧಿಸುತ್ತವೆ. ಈ ಹುಳುಗಳು ತೆನೆಯಲ್ಲಿನ ಹಾಲುಗಾಳು ಮತ್ತು ಬಲಿಯುತ್ತಿರುವ ಕಾಳುಗಳನ್ನು ಕಡಿದು ತಿನ್ನುತ್ತವೆ. ಇವುಗಳ ಹಾವಳಿಗೆ ತುತ್ತಾದ ತೆನೆಗಳ ಇಲುಕುಗಳನ್ನು ಬಿಡಿಸಿ ನೋಡಿದಲ್ಲಿ ಬಿಳಿಯ ವಿಸರ್ಜಿತ ಪದಾರ್ಥವನ್ನು ಕಾಣಬಹುದು.

ನಿರ್ವಹಣಾ ಕ್ರಮಗಳು: ತೆನೆ ಕೀಟಗಳ ನಿಯಂತ್ರಣಕ್ಕೆ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಎಕರೆಗೆ ಅಂದಾಜು 200 ಲೀ. ಸಿಂಪರಣಾ ದ್ರಾವಣ ಬೇಕಾಗುತ್ತದೆ. ನೀರಿನ ಅಭಾವವಿದ್ದಲ್ಲಿ ಫೋಜಲೋನ್ ಶೇ. 4 ರ ಧೂಳು ಅಥವಾ ಕ್ವಿನಾಲ್‌ಫಾಸ್ ಶೇ. 15 ರ ಧೂಳನ್ನು ಎಕರೆಗೆ 8 ಕಿ.ಗ್ರಾಂ ಪ್ರಮಾಣದಲ್ಲಿ ಧೂಳೀಕರಿಸಬೇಕು.

ರೋಗಗಳು

ಬೆಂಕಿ ರೋಗ



ಲಕ್ಷಣಗಳು: ಎಲೆಯ ಮೇಲೆ ವಜ್ರಾಕಾರದ ಸಣ್ಣ ಚುಕ್ಕೆಗಳು ಕಾಣಿಸಿಕೊಂಡು ಕ್ರಮೇಣ ಚುಕ್ಕೆಗಳು ದೊಡ್ಡದಾಗುತ್ತವೆ. ಈ ಮಚ್ಚೆಗಳು ಕೆಂಪುಮಿಶ್ರಿತ ಕಂದು ಬಣ್ಣದ್ದಾಗಿದ್ದು ಮಧ್ಯಭಾಗದಲ್ಲಿ ಬೂದು ಬಣ್ಣದಿಂದ ಕೂಡಿರುತ್ತವೆ. ಹಲವಾರು ಚುಕ್ಕೆಗಳು ಎಲೆಯ ಮೇಲೆ ಕಂಡುಬಂದು ವಿಸ್ತರಿಸುತ್ತಾ ಒಂದಕ್ಕೊಂದು ಸೇರಿಕೊಂಡು ಎಲೆಗಳು ಒಣಗಿ ಸುಟ್ಟಂತೆ ಕಾಣುತ್ತವೆ. ತೆನೆಯು ಬರುವಾಗ ಈ ರೋಗದ ಮಚ್ಚೆಗಳು ತೆನೆಯ ಕೆಳಭಾಗದಲ್ಲಿ ಕಾಣಿಸಿಕೊಂಡು ಕ್ರಮೇಣ ಕುತ್ತಿಗೆಯ ಭಾಗವನ್ನೆಲ್ಲಾ ಆವರಿಸಿ, ಆ ಭಾಗವು ಕೊಳೆತು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ರೋಗವು ತೆನೆಯಲ್ಲಿ ಇಲುಕುಗಳ ಮೇಲೆ ಸಾಮಾನ್ಯವಾಗಿ ಕಂಡು ಬಂದು ಪೂರ್ಣ ಇಲುಕು ಅಥವಾ ಕೆಲವು ಭಾಗ ಕಾಳು ಕಟ್ಟದೆ ಜೊಳ್ಳಾಗುತ್ತದೆ.

ನಿರ್ವಹಣಾ ಕ್ರಮಗಳು: ಈ ರೋಗದ ಶಿಲೀಂದ್ರವು ಗಾಳಿಯಿಂದ ಹರಡುತ್ತದೆ ಅಥವಾ ಬೀಜವೂ ಮೂಲವಾಗಿರುವುದು. ಬೆಳೆಯು ಬೆಳೆದಂತೆ ರೋಗವು ಹರಡುತ್ತದೆ. ಶೇ. 50–75 ಭಾಗದಷ್ಟು ತೆನೆಯು ಹೊರಬಂದ ನಂತರ ಶಿಲೀಂದ್ರನಾಶಕಗಳಾದ ಮ್ಯಾಂಕೊಜೆಬ್ 75 ಡಬ್ಲ್ಯೂ.ಪಿ. 2.0 ಗ್ರಾಂ ಅಥವಾ ಕಾರ್ಬನ್‌ಡೈಜಿಮ್ 50 ಡಬ್ಲ್ಯೂ.ಪಿ 0.5 ಗ್ರಾಂ ಅಥವಾ ಕಿಟಾಜಿನ್ 48 ಇ.ಸಿ. 1.0 ಮಿ.ಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಈ ರೋಗದ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣವು ಕಂಡುಬಂದಲ್ಲಿ ಇನ್ನೊಂದು ಬಾರಿ ಮೊದಲನೆ ಸಿಂಪರಣೆಯ 12 ದಿನಗಳ ನಂತರ ಸಿಂಪಡಿಸಬೇಕು. ಸಸಿಮಡಿಯಲ್ಲಿ ಸಣ್ಣ ಸಸಿಗಳ ಮೇಲೆ ರೋಗ ಕಾಣಿಸಿಕೊಂಡಲ್ಲಿ ನಾಟಿ ಮಾಡುವುದಕ್ಕೆ ಮೊದಲು ಸಸಿಗಳಿಗೆ ಒಂದು ಸಲ ಮೇಲೆ ತಿಳಿಸಿದ ಕ್ರಮಗಳನ್ನು ಅನುಸರಿಸಬೇಕು.

ಕಂದು ಚುಕ್ಕೆ ರೋಗ

ಲಕ್ಷಣಗಳು: ರೋಗ ತಗುಲಿದ ಸಸಿಗಳಲ್ಲಿ ಮೊದಲು ಎಲೆಯ ಮೇಲೆ ಸಣ್ಣ ಅಂಡಾಕಾರದ ಕಂದು ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ರೋಗ ತೀವ್ರವಾದಾಗ ರೋಗದ ಸೋಂಕು ಕಾಂಡ ಮತ್ತು ತೆನೆಯ ಮೇಲೆ ಕಾಣಿಸಿಕೊಂಡು ಬೆಳೆಯು ಅಕಾಲದಲ್ಲಿ ಒಣಗುತ್ತದೆ.

ನಿರ್ವಹಣಾ ಕ್ರಮಗಳು: ಒಂದು ಕಿ.ಗ್ರಾಂ. ಬೀಜಕ್ಕೆ 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ. ಶಿಲೀಂದ್ರನಾಶಕವನ್ನು ಬೆರೆಸಿ ಬಿತ್ತನೆ ಮಾಡಬೇಕು. ಬೆಳೆಯು ಹೂ ಬಿಡುವ ಹಂತದಲ್ಲಿ ರೋಗವು ಕಾಣಿಸಿಕೊಂಡರೆ ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ. ಶಿಲೀಂದ್ರನಾಶಕವನ್ನು 1 ಲೀ. ನೀರಿಗೆ 2 ಗ್ರಾಂ ಪ್ರಮಾಣದಲ್ಲಿ ಬೆರೆಸಿ ಸಿಂಪಡಿಸಬೇಕು.

ಬುಡ ಕೊಳೆ ರೋಗ



ಲಕ್ಷಣಗಳು: ಈ ರೋಗ ಮಣ್ಣಿನಲ್ಲಿನ ಶಿಲೀಂದ್ರದಿಂದ ಉಂಟಾಗುವುದರಿಂದ ಎಲ್ಲಾ ಸಸಿಗಳಲ್ಲಿ ಕಾಣದೆ ಆಯ್ದ ಸಸಿಗಳಲ್ಲಿ ಕಂಡು ಬರುತ್ತದೆ. ರೋಗಪೀಡಿತ ಸಸಿಗಳು ಬಾಡಿ ಕುಗ್ಗಿದಂತಾಗಿ ಕ್ರಮೇಣ ಬುಡ ಕೊಳೆತು ನಾಶವಾಗುವುದು.

ನಿರ್ವಹಣಾ ಕ್ರಮಗಳು: ಬಿತ್ತನೆಗೆ ಮುಂಚೆ ಆಳವಾಗಿ ಉಳುಮೆ ಮಾಡುವುದು, ರಾಗಿ ಬೆಳೆದ ನಂತರ ಬೇರೆ ಬೆಳೆಗಳನ್ನು ಬೆಳೆಯುವುದು ಹಾಗೂ ಮಣ್ಣಿನಲ್ಲಿ ಸಮರ್ಪಕ ತೇವಾಂಶವನ್ನು ಕಾಪಾಡಿಕೊಳ್ಳುವುದು ಮುಂತಾದ ಬೇಸಾಯ ಕ್ರಮಗಳಿಂದ ಈ ರೋಗವನ್ನು ನಿರ್ವಹಿಸಬಹುದು.

ಇಳುವರಿ (ಪ್ರತಿ ಎಕರೆಗೆ)

ಕಾಳು	12–14 ಕ್ವಿಂ
ಮೇವು	12–16 ಕ್ವಿಂ

ಖರ್ಚು ಇಲ್ಲದ ಬೇಸಾಯ ಕ್ರಮಗಳು

- ಬಿತ್ತನೆಗೆ 3 ವಾರಗಳ ಮೊದಲೇ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೊಸ್ಟ್ ಮಣ್ಣಿನಲ್ಲಿ ಬೆರೆಸಬೇಕು
- ಬಿತ್ತನೆಗೆ ಜೂನ್ ಎರಡನೆಯ ಪಾಕ್ಷಿಕ ಸೂಕ್ತಕಾಲ
- ಶುಷ್ಕ ವಾತಾವರಣವಿರುವಾಗ ಪದೇ ಪದೇ ಅಂತರ ಬೇಸಾಯ ಮಾಡಬೇಕು

****